DEEDS
# ಸಂವಾದ
ಸಮತೆಯ ಸಮಾಜದೆಡೆಗೆ
ಸಂವಾದ 1
ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಲೇಖನಿಯಿಂದ....



ಮರ್ಲಿನ್ ಮಾರ್ಟಿಸ್

'ಡೀಡ್ಸ್' (ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್) ಸಂಸ್ಥೆಯು ಅಭಿವೃದ್ಧಿಪರ ಕ್ಷೇತ್ರದಲ್ಲಿ ಕಳೆದ ಸುಮಾರು 35 ವರುಷಗಳಿಂದ ತೊಡಗಿಕೊಂಡಿರುವ ಒಂದು ಸ್ವಯಂಸೇವಾ ಸಂಸ್ಥೆಯಾಗಿದೆ. ದಿವಂಗತರಾದ ಡಿಸ್ಮೆಂಡ್ ಡಿ' ಅಬ್ರಿಯೋ ಮತ್ತು ಅವರ ಪತ್ನಿ ಮಾರ್ಗರೆಟ್ ಡಿ'ಅಬ್ರಿಯೋರಿಂದ ಮಂಗಳೂ ರಿನಲ್ಲಿ ಕಾರ್ಯಾರಂಭಿಸಿದ ಸಂಸ್ಥೆಯು ಆರಂಭದಲ್ಲಿ ಅವಿಭಜಿತ ದಕ್ಷಿಣ ಕನ್ನಡದಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು ಆನಂತರದಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಕರ್ನಾಟಕದಾದ್ಯಂತ ವಿಸ್ತರಿಸಿದೆ. ಶ್ರೀಮತಿ ಮರ್ಲಿನ್ ಮಾರ್ಟಿಸ್ ಅವರು ಸಂಸ್ಥೆಯ ನಿರ್ದೇಶಕರಾಗಿದ್ದಾರೆ.

ಲಿಂಗ ತಾರತಮ್ಯ, ಬಹು ಬಗೆಯ ಸಾಮಾಜಿಕ ಅನ್ಯಾಯಗಳು ಇತ್ಯಾದಿಗಳ ವಿರುದ್ಧ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ತಮ್ಮ ಹಕ್ಕುಗಳ ಪರವಾಗಿ ಹೋರಾಡಲು ಅನುವಾಗುವಂತೆ ಅವರನ್ನು ಸಂಘಟಿಸಿದೆ. ತರಬೇತಿಗಳಿಗೆ ಪೂರಕವಾಗಿ ಮಹಿಳಾ ಹಕ್ಕುಗಳನ್ನು ಕುರಿತ ಹಾಗೂ ಲಿಂಗ ಸಮಾನತೆಯನ್ನು ಸಾರುವ ಸಮೃದ್ಧ ಸಂಪನ್ಮೂಲಗಳನ್ನು ಡೀಡ್ಸ್ ಕ್ರೋಡೀಕರಿಸಿದೆ. ಲಿಂಗತ್ವ ಪರಿಕಲ್ಪನೆಯ ಸಂವೇದಿ ದ್ವೈಮಾಸಿಕ ಪತ್ರಿಕೆಯನ್ನು, ಮೌಲಿಕ ಶೈಕ್ಷಣಿಕ ಸಾಹಿತ್ಯಗಳನ್ನೂ ಹೊರತರುತ್ತಿದೆ.

ಮಹಿಳೆಯರನ್ನು ಕುರಿತ ಸಮಾಜದ ಮನೋಭೂಮಿಕೆಯನ್ನು ಬದಲಿಸುವ ಕುರಿತು ಪೂರಕ ಕಾನೂನು ತರಬೇತಿಗಳನ್ನು ಸಂಘಟಿಸಿ ಮಹಿಳಾ ತರಬೇತುದಾರರ ಕೊರತೆಯನ್ನು ನೀಗಿಸಲು ಸುಗಮಗಾರರನ್ನು ರೂಪಿಸುತ್ತಿದೆ. ಕರ್ನಾಟಕ ರಾಜ್ಯ ಮಹಿಳಾ ತರಬೇತುದಾರರ ಸಂಚಲನ ಎಂಬ ತರಬೇತುದಾರರ ತಂಡವೊಂದು ಈಗಾಗಲೇ ರೂಪುಗೊಂಡಿದೆ. ಈ ಬಾರಿ ಕೊಪ್ಪಳ ಮತ್ತು ಗದಗ ಜಿಲ್ಲೆಗಳನ್ನು ತನ್ನ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡು ಸುಗಮಗಾರರಾಗಿ ಪುರುಷರನ್ನೂ ಒಳಗೊಳ್ಳುತ್ತಿದೆ.

ಪೂರಕ ಕಾನೂನು ತರಬೇತಿಯನ್ನು ಸ್ವಯಂಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆಸಬೇಕೆನ್ನುವ ನಮ್ಮ ಆಶಯಕ್ಕೆ ಅಪೂರ್ವ ಬೆಂಬಲ ಸಿಕ್ಕಿದ್ದು ಗದಗ ಜಿಲ್ಲಾ ಸಂಚಲನ ತಂಡವು ಗದಗಿನ ತರಬೇತಿಯ ನಿರ್ವಹಣೆಯನ್ನು ವಹಿಸಿಕೊಂಡಿದೆ. ಹಾಗೆಯೇ ಕೊಪ್ಪಳ ಜಿಲ್ಲೆಯ ಜವಾಬ್ದಾರಿಯನ್ನು ಸರ್ವೋದಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ವಹಿಸಿಕೊಂಡಿದೆ ಎಂದು ಹೇಳಲು ಹರ್ಷಿಸುತ್ತೇವೆ. ಮಹಿಳಾ ಸಬಲೀಕರಣದ ಯಾನದಲ್ಲಿ ಕೈಜೋಡಿಸಿದ ಈ ಎರಡೂ ಸಂಸ್ಥೆಗಳಿಗೆ ಹಾಗೂ ತರಬೇತಿಗಳಿಗೆ ಶಿಬಿರಾರ್ಥಿಗಳನ್ನು ಕಳುಹಿಸಿಕೊಡಲು ಒಪ್ಪಿರುವ ಎಲ್ಲಾ ಸ್ವಯಂಸೇವಾ ಸಂಸ್ಥೆಗಳಿಗೆ ನಾವು ಆಭಾರಿಯಾಗಿದ್ದೇವೆ.

ಸಮಾನತೆಯತ್ತ ನಮ್ಮ ನಡಿಗೆಯನ್ನು ವಿಸ್ತರಿಸಿದ್ದೇವೆ; ನಿಮ್ಮೊಂದಿಗೆ ಆರಂಭಿಸಿದ್ದೇವೆ. ಜತೆಯಾಗಿ ಸಾಗೋಣ.

## 'ಸಂವಾದ' ಯಾಕೆ?

ಡೀಡ್ಸ್ ಸಂಸ್ಥೆಯ ಬೇರು ಮಂಗಳೂರಿನಲ್ಲಿದ್ದರೂ ಅದರ ಕವಲುಗಳು ಕರ್ನಾಟಕದಾದ್ಯಂತ ಹಬ್ಬಿವೆ. ಕರ್ನಾಟಕ ಸರ್ಕಾರದ ಸಂಪೂರ್ಣ ಸಾಕ್ಷರತಾ ಆಂದೋಲನ, ಜಲಸಂವರ್ಧನಾ ಯೋಜನೆ, ಪರ್ಯಟನ ಜಾಗೃತಿ ಅಭಿಯಾನ, ಮುಂದುವರಿಕಾ ಶಿಕ್ಷಣದಂತಹ ಜನಪರ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ.

2006ನೇ ಇಸವಿಯಲ್ಲಿ ಕರ್ನಾಟಕದಾದ್ಯಂತ ಮಹಿಳಾ ತರಬೇತುದಾರರ ಸಂಚಲನವನ್ನು ಹುಟ್ಟುಹಾಕಿ ಈ ತಂಡದ ಮೂಲಕ ಲಿಂಗತ್ವ, ಕೌಟುಂಬಿಕ ದೌರ್ಜನ್ಯ ಅಭಿಯಾನವನ್ನು ಕರ್ನಾಟಕದ ಮೂವತ್ತು ಜಿಲ್ಲೆಗಳಲ್ಲಿ ಕೈಗೊಂಡಿದೆ; ಮಹಿಳೆಯರನ್ನು ಸಂಘಟಿಸುತ್ತಾ ಅವರೊಂದಿಗೆ ನಿರಂತರ ಒಡನಾಟ, ಸಂವಾದವನ್ನು ಹಲವು ರೂಪಗಳಲ್ಲಿ ನಡೆಸಿಕೊಂಡು ಬಂದಿದೆ.

ನಮ್ಮ ಕೆಲಸಗಳು ದಾಖಲಾಗಿ ಅವು ಲೋಕಾಂತಗೊಳ್ಳಬೇಕು, ನಮ್ಮ ನಡುವೆ ಒಂದು ಅರ್ಥಪೂರ್ಣ ಸಂವಹನ–ಸಂವಾದ ಸಾಧ್ಯವಾಗಿ ಮಾಹಿತಿಗಳು ತಳಮಟ್ಟಕ್ಕೆ ವಿಸ್ತರಿಸಬೇಕು ಎಂಬ ಆಶಯದಿಂದ ಡೀಡ್ಸ್ ಸಂವಾದವನ್ನು ಹೊರತರುತ್ತಿದ್ದೇವೆ. ಇದು ಸಮತೆಯೆಡೆಗಿನ ನಮ್ಮ ನಡಿಗೆಯನ್ನು ಸ್ಪಷ್ಟಪಡಿಸಿಕೊಳ್ಳುವ, ಗಟ್ಟಿಗೊಳಿಸಿಕೊಳ್ಳುವ, ಸಂವಾದ ನಡೆಸುವ ಒಂದು ಪುಟ್ಟ ವೇದಿಕೆ.

ಸಂವಾದ ನಡೆಸುವುದು ಒಬ್ಬರಿಂದಲೇ ಸಾಧ್ಯವಿಲ್ಲ. ಅದಕ್ಕೆ ಹಲವು ದನಿಗಳಿದ್ದರೇ ಚೆಂದ. ಎಂದೇ ನಿಮ್ಮ ಅನಿಸಿಕೆ, ಅನುಭವ,



ವಿಮರ್ಶೆಗಳನ್ನು ಸಂವಾದದೊಂದಿಗೆ ಹಂಚಿಕೊಳ್ಳಿ. ಮಹಿಳೆಯರ ಬದುಕನ್ನು ತೆರೆದಿಡುವ, ಅವರಿಗೆ ಸ್ಫೂರ್ತಿ ನೀಡುವ, ಕವನ, ಚಿಕ್ಕಪುಟ್ಟ ಲೇಖನಗಳು, ನೀವು ಮಾಡಿದ ತರಬೇತಿಗಳ ಚಿತ್ರಸಹಿತವಾದ ವರದಿ ಇತ್ಯಾದಿಗಳನ್ನು ಹಂಚಿಕೊಳ್ಳಿ. ಸಂವಾದವನ್ನು ನೀವು ಓದಿ, ಇತರರಿಗೂ ಓದಿಸಿ. ಹೀಗೆ ಮಾಡುತ್ತಾ ಬರವಣಿಗೆಯ ಲೋಕಕ್ಕೆ ಲಗ್ಗೆಯಿಟ್ಟು ನಿಮ್ಮದೇ ರೀತಿಯಲ್ಲಿ ಮಹಿಳಾದನಿಯನ್ನು ಪ್ರತಿಧ್ವನಿಸಲು ಇಂತಹಾ ಪತ್ರಿಕೆಯೊಂದನ್ನು ಹೊರತರಲು ನೀವು ಶಕ್ತರಾಗಬೇಕು ಎಂಬ ಆಶಯ ನಮ್ಮದು; ಶಕ್ತರಾಗುತ್ತೀರಿ ಎಂಬ ವಿಶ್ವಾಸವೂ ನಮ್ಮದು.

ಸಂವಾದದ ಪುಟಗಳನ್ನು ನಿಮಗಾಗಿ ತೆರೆದಿಟ್ಟಿದ್ದೇವೆ. ಈ ಪುಟಗಳಲ್ಲಿ ನಿಮ್ಮ ಸಂವೇದನೆಗಳು ಅಕ್ಷರಗಳಲ್ಲಿ ಅರಳಲಿ ಎಂದು ಹಾರೈಸುತ್ತೇವೆ.

# ಪೂರಕ ಕಾನೂನು ಜ್ಞಾನದ ಅಗತ್ಯ



ಮಹಿಳೆಯರ ಪರಿಸ್ಥಿತಿ ಯಾಕೆ ಹೀಗಿದೆ? ಹೀಗಿರುವುದು ಬೇಡವೆಂದಾದರೆ ಈ ಕ್ಷಣದಿಂದಲೇ ಬದಲಾವಣೆಯತ್ತ ಹೊರಳುವ ಕುರಿತು ನಾವು ಆಲೋಚಿಸಬೇಕಾಗಿದೆ. ಆಲೋಚನೆಗೆ ತೊಡಗಿದಂತೆಲ್ಲ ಮಹಿಳೆಯರ ಈ ಹೀನ ಪರಿಸ್ಥಿತಿಗೆ ಮೂಲವಾದ ಸಂಗತಿಗಳು ಅರ್ಥವಾಗತೊಡಗುತ್ತವೆ. ಸಮಸ್ಯೆಯ ಮೂಲ ಅರ್ಥವಾದಂತೆಲ್ಲ ಆ ಸಮಸ್ಯೆಯನ್ನು ಬೇರು ಮೂಲದಿಂದ ಕಿತ್ತೆಸೆಯುವ ಕ್ರಿಯೆಗೆ ಚಾಲನೆ ದೊರೆಯುತ್ತದೆ. ಬದಲಾವಣೆ ಶುರುವಾಗುವುದು ನಮ್ಮಿಂದಲೇ.

ನಮ್ಮದು ಗಂಡಾಳ್ವಿಕೆಯ ಸಮಾಜ ಎಂದರೆ, ಇಲ್ಲಿ ಗಂಡೇ ಪ್ರಧಾನವಾಗಿದ್ದು ಮಹಿಳೆ ಅವನ ಆನಂತರದವಳಾಗಿ ಗುರುತಿಸಿಕೊಳ್ಳುತ್ತಾಳೆ. ಒಬ್ಬರು ಶ್ರೇಷ್ಠ ಮತ್ತೊಬ್ಬರು ಕನಿಷ್ಠ ಎಂದಾದಾಗ ಶ್ರೇಷ್ಠರೆನಿಸಿಕೊಂಡವರು ತಮಗೆ ಅನುಕೂಲವಾಗುವಂತೆ ನೀತಿ ನಿಯಮಗಳನ್ನು ರೂಪಿಸಿ ಇತರರ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಮಹಿಳೆಯರ ಮೇಲೆ ಆಗಿರುವುದೂ ಇದೇ. ಇದರ ಪರಿಣಾಮವನ್ನು ಮೇಲಿನ ಹಿಂಸಾ ಗಡಿಯಾರ ಚೆನ್ನಾಗಿ ತೆರೆದಿಡುತ್ತದೆ. ಗಂಡಾಳ್ವಿಕೆಯ ಸಮಾಜದಲ್ಲಿ ನಾನಾ ರೀತಿಯ ಹಿಂಸೆ ದೌರ್ಜನ್ಯಗಳನ್ನು ಅನುಭವಿಸುವ, ಅವಕಾಶಗಳಿಂದ ನಿರಾಕರಿಸಲ್ಪಡುವ ಮಹಿಳೆಯರನ್ನು ಸಬಲಗೊಳಿಸಬೇಕಾದರೆ ಹಕ್ಕುಗಳನ್ನು ಅವರಿಗೆ ಪರಿಚಯಿಸಿ ತಮ್ಮ ಮೇಲಾಗುವ ಶೋಷಣೆ ಅನ್ಯಾಯಗಳನ್ನು ಅವರು ಮೆಟ್ಟಿ ನಿಲ್ಲುವಂತೆ ಮಾಡಬೇಕಿದೆ. ಹಾಗೆಯೇ ಸಮಾಜದ ರೀತಿನೀತಿಗಳಿಂದ ಅಸಹಜವಾಗಿ ಬದುಕುತ್ತಿರುವ ಪುರುಷರಿಗೆ ಸಮಾನತೆಯ ಬದುಕಿನ ಅಗತ್ಯವನ್ನು ಮನವರಿಕೆ ಮಾಡಿಕೊಡಬೇಕಿದೆ. ಹೀಗೆ ಅರ್ಥ ಮಾಡಿಸುವುದು ಬಲುದೊಡ್ಡ ಸವಾಲು. ಈ ಸವಾಲನ್ನು ನಿರ್ವಹಿಸುವುದಕ್ಕೆ ನೂರಾರು ಕೈಗಳು ಜತೆಗೂಡಬೇಕಿವೆ.

ಕಾನೂನಿನ ಪ್ರಾಥಮಿಕ ಜ್ಞಾನ ಹಾಗೂ ಸಮಾಜದಲ್ಲಿ ಹಾಸುಹೊಕ್ಕಿರುವ ಹೆಣ್ಣು ಗಂಡು ಅಸಮಾನತೆಯ ಕುರಿತು ತಿಳಿವಳಿಕೆ ಇದ್ದಾಗ ಮಹಿಳಾ ವಿರೋಧಿ ಧೋರಣೆಗಳನ್ನು, ತಾರತಮ್ಯಗಳನ್ನು, ಹಿಂಸೆ ಅನ್ಯಾಯಗಳನ್ನು ಪ್ರತಿಭಟಿಸಲು, ಎದುರಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪೂರಕ ಕಾನೂನಿನ ಜ್ಞಾನ ಹೆಚ್ಚಿನ ಬಲವನ್ನು ನೀಡಬಲ್ಲುದು.

* ಪಾಠಿಚೀಲದ ಕೊಳ್ಳಿಗೆ ಕರಿಮಣಿ ಸರ ಉರ್ಲ ಆಕೃತಿ – ಬಸವರಾಜ್ ಸೂಳಿಮನಿ
* ಆಡೋ ಕೂಸಿಗೆ ಹಸೀ ಮಣೀ ಯಾಕ? ಕುಣಿಯೋ ಕೂಸಿಗೆ ಕರೀಮಣೀ ಯಾಕ? ಮಂದೀ ತಲೀಕೆಡಿಸ್ಯಾರೇನು ನಿಮಗಾ... ತಗ್ ತಗೀರಿ ಛಲೋ ಅಲ್ಲ – ಮಂಜುನಾಥ್ ಸಿ. ನೆಟ್ಕಲ್

## ಸಂವಾದ–ಸಾಂತ್ವನ

ನಾಗವೇಣಿಯು ತನ್ನ ತರಗತಿಯ ಚುರುಕು ಮಕ್ಕಳಲ್ಲಿ ಒಬ್ಬಳಾಗಿದ್ದಳು. ತಾನು ಓದಿ ಒಳ್ಳೆಯ ಕೆಲಸಕ್ಕೆ ಸೇರಬೇಕೆಂದು ಕನಸು ಕಂಡಿದ್ದಳು. ಆದರೆ ಆಕೆಯ ಕುರಿತು ಹೆತ್ತವರ ಆಲೋಚನೆ ಬೇರೆಯೇ ಇತ್ತು.

ಅವಳು ಹತ್ತನೆ ತರಗತಿಯ ಕೊನೆಯ ಪರೀಕ್ಷೆ ಮುಗಿಸಿ ಮನೆಗೆ ಬರುತ್ತಿದ್ದಂತೆಯೇ ಅವಳ ಹೆತ್ತವರು ಕಲಬುರ್ಗಿ ತಾಲೂಕಿನ ಸಂಬಂಧಿಯೊಬ್ಬನೊಂದಿಗೆ ಅವಳ ಮದುವೆ ನಡೆಯಲಿದೆ ಎಂದು ತಿಳಿಸಿದರು. ಮದುವೆಯ ವೆಚ್ಚ ಕಡಿಮೆ ಮಾಡಲು ಒಂದೇ ಮಂಟಪದಲ್ಲಿ ನಾಲ್ಕು ಮದುವೆಗಳನ್ನು ಏರ್ಪಡಿಸುವ ಯೋಚನೆ ಅವರದಾಗಿತ್ತು.

ನಾಗವೇಣಿ ವಿಧಿಯಿಲ್ಲದೆ ತನ್ನ ಹೆತ್ತವರ ನಿರ್ಧಾರವನ್ನು ಒಪ್ಪಿಕೊಳ್ಳಬೇಕಾಯಿತು. ಈ ಮದುವೆಯ ಸುದ್ದಿ ಅದು ಹೇಗೋ ಮಕ್ಕಳ ಸಹಾಯವಾಣಿಗೆ ತಲಪಿತು. ಅವರು ತಕ್ಷಣವೇ ಅಲ್ಲಿಗೆ ತಲುಪಿ ಅಲ್ಲಿ ನಡೆಯಲಿದ್ದ 16 ರ ಮತ್ತು 13 ರ ಹರೆಯದ ಮಕ್ಕಳ ಮದುವೆಯನ್ನು ತಡೆದು ನಿಲ್ಲಿಸಿದರು. ಆ ಮಕ್ಕಳ ಹೆತ್ತವರಿಗೂ ತಿಳಿಹೇಳಿದರು.

ಹತ್ತನೆ ತರಗತಿಯ ಪರೀಕ್ಷಾ ಫಲಿತಾಂಶ ಹೊರಬಂದಾಗ ನಾಗವೇಣಿಗೆ ಶೇ. 82.72 ಅಂಕ ಬಂದಿತ್ತು. ಅವಳು ಪತ್ರಿಕೆಗಳಿಗೆ ನಾನು ಕಾಮರ್ಸ್ ಓದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತೇನೆ ಅಲ್ಲಿಯವರೆಗೆ ಮದುವೆಯಾಗುವುದಿಲ್ಲ ಎಂದು ಹೇಳಿದಳು. ನಿಜ ಹೇಳಬೇಕೆಂದರೆ ನಾಗವೇಣಿಯೇ ಮಕ್ಕಳ ಸಹಾಯವಾಣಿಗೆ ಕರೆಮಾಡಿ ಮದುವೆ ನಿಲ್ಲಿಸುವಂತೆ ಮಾಡಿದ್ದಳು. (ಕೃಪೆ: ದಿ ಹಿಂದೂ ದಿನಪತ್ರಿಕೆ)

### ಪ್ರಶ್ನೆಗಳು

- ನಾಗವೇಣಿಯ ನಿರ್ಧಾರದ ಬಗೆಗೆ ನಿಮಗೆ ಏನು ಅನ್ನಿಸುತ್ತದೆ?
- ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳೇನು?
- ನಿಮ್ಮ ಸುತ್ತ ಬಾಲ್ಯವಿವಾಹ ನಡೆಯುವುದು ತಿಳಿದುಬಂದರೆ ನೀವೇನು ಮಾಡುತ್ತೀರಿ?

**(ಈ ಪ್ರಶ್ನೆಗಳಿಗೆ ಉತ್ತರ ಬರೆದು ನಮಗೆ ಕಳುಹಿಸಿ ಕೊಡಿ)**

## ಸಂವಾದ – ಅಭಿಯಾನ




ಇನ ಮುಗನ್ಯಾಗಿನ ಸುಂಬಳಾ ತಕ್ಕೋಳಾಕ ಬರಾಂಗಿಲ್ಲ ಹಿಂತಾ ಹುಡಗೀಗಿ ಮದುವಿ ಮಾಡ್ತಾರತ ಗೊತ್ತಾಗುದುಲ್ಲನ ಯಾರನಾರ ನಿಕಾಲ ಮಾಡೀರಿ

– ವೀರು ಮೋದಿ ಮೌರ್ಯ

## ಮಹಿಳಾಪರ ಚಿಂತನೆಯತ್ತ ಗದಗ ಹಾಗೂ ಕೊಪ್ಪಳ ಜಿಲ್ಲೆಯ ಸ್ವಯಂಸೇವಾ ಸಂಸ್ಥೆಗಳ ಸಮನ್ವಯತೆ

ಉತ್ತರಕರ್ನಾಟಕದ ಜಿಲ್ಲೆಗಳಾದ ಗದಗ ಮತ್ತು ಕೊಪ್ಪಳ ಜಿಲ್ಲೆಗಳು ಮಾನವಾಭಿವೃದ್ಧಿ ಸೂಚ್ಯಂಕಗಳು ಕಡಿಮೆ ಇರುವ, ಬಾಲ್ಯವಿವಾಹ, ರಕ್ತಹೀನತೆ, ದೇವದಾಸಿ ಪದ್ಧತಿ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ, ಅಪೌಷ್ಠಿಕತೆ, ಬಯಲು ಶೌಚ ಪದ್ಧತಿ, ಬಾಲಕಾರ್ಮಿಕತೆ, ತಾಯಿಮರಣ, ಶಿಶುಮರಣ ಮೊದಲಾದ ಸಾಮಾಜಿಕ ಸಮಸ್ಯೆಗಳು ನೆಲೆಯಾಗಿರುವ ಜಿಲ್ಲೆಗಳೆಂದು ಗುರುತಿಸಲ್ಪಟ್ಟಿವೆ. ಈ ಎಲ್ಲ ಸಾಮಾಜಿಕ ಸಮಸ್ಯೆಗಳು ಅತ್ಯಂತ ಹೆಚ್ಚು ಕಾಡುವುದು ಹೆಣ್ಣನ್ನೇ.

ಈ ವಿಚಾರಗಳನ್ನು ಕುರಿತು ಚರ್ಚಿಸುವ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಡೀಡ್ಸ್ ತಂಡವು ಗದಗ ಹಾಗೂ ಕೊಪ್ಪಳ ಜಿಲ್ಲೆಗಳನ್ನು ತನ್ನ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡಿದೆ. ಗದಗ ಜಿಲ್ಲಾ ಕಾರ್ಯಕ್ರಮ ಸಂಯೋಜಕರಾಗಿ ಫಕ್ಕೀರಮ್ಮ ಎಸ್ ಲಕ್ಕುಂಡಿ ಮತ್ತು ಕೊಪ್ಪಳ ಜಿಲ್ಲಾ ಕಾರ್ಯಕ್ರಮ ಸಂಯೋಜಕರಾಗಿ ದಿವ್ಯಾ ಅದಿತಿ ಜೋಗಿಯವರು ಕಾರ್ಯನಿರ್ವಹಿಸುತ್ತಿದ್ದಾರೆ.

### ಲೀಡ್ ಸ್ವಯಂಸೇವಾ ಸಂಸ್ಥೆಯ ಆಯ್ಕೆ

ಗದಗ ಜಿಲ್ಲೆಯಲ್ಲಿ ಮೂರು ವರುಷಗಳ ಪೂರಕ ಕಾನೂನು ಸುಗಮಗಾರರ ತರಬೇತಿ ಯೋಜನೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಲೀಡ್ ಎನ್‌ಜಿಒ ಒಂದನ್ನು ಗುರುತಿಸುವ ಪ್ರಕ್ರಿಯೆಯನ್ನು ಮೊದಲಾಗಿ ನಡೆಸಲಾಯಿತು. ಗದಗ ಜಿಲ್ಲೆಯಲ್ಲಿ ಈಗಾಗಲೇ ಡೀಡ್ಸ್ ತರಬೇತಿಗಳ ಪರಿಣಾಮವಾಗಿ ರೂಪುಗೊಂಡ ಗದಗ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನವು ಸಾಕಷ್ಟು ಕ್ರಿಯಾಶೀಲವಾಗಿರುವುದರಿಂದ, ಸಂಸ್ಥೆಯ ಪದಾಧಿಕಾರಿಗಳೊಂದಿಗೆ ದಿನಾಂಕ 9–1–2017 ರಂದು ಸಭೆಯನ್ನು ನಡೆಸಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಈ ಸಭೆಯಲ್ಲಿ ಸಂಚಲನ ಘಟಕದ ಅಧ್ಯಕ್ಷರಾದ ಮಂಜುಳಾ ಕಳಕೇರಿ, ಸದಸ್ಯರಾದ ಫರೀದಾ ಬೇಗಮ್ ನಡಾಫ್, ಫಕ್ಕೀರಮ್ಮ ಎಸ್ ಲಕ್ಕುಂಡಿ, ಉಮಾ ಬಾರ್ಕಿ, ಪ್ರಭಾವತಿ ಬಿ ಉಪಸ್ಥಿತರಿದ್ದರು. ಡೀಡ್ಸ್ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಯೋಜನೆಯ ಮಾಹಿತಿ ನೀಡಿದರು. ಡೀಡ್ಸ್‌ನ ಸಲಹೆಗಾರರಾದ ಮೋಹನ್ ಚಂದ್ರ ಸಭೆಯನ್ನು ನಿರ್ವಹಿಸಿ ತುಕಾರಾಮ ಎಕ್ಕಾರು ಅವರು ಎಲ್ಲರಿಗೂ ಧನ್ಯವಾದವಿತ್ತರು.

### ಸಹಭಾಗಿ ಸ್ವಯಂಸೇವಾ ಸಂಸ್ಥೆಗಳ ಸಭೆ

ಪೂರಕ ಕಾನೂನು ತರಬೇತಿಗೆ ಶಿಬಿರಾರ್ಥಿಗಳನ್ನು ಕಳುಹಿಸಿಕೊಟ್ಟು ಪ್ರೋತ್ಸಾಹ ನೀಡಿದ ಸ್ವಯಂಸೇವಾ ಸಂಸ್ಥೆಗಳ ಮುಖ್ಯಸ್ಥರ ಸಭೆಯನ್ನು ಗದಗದ ಕರ್ನಾಟಕ ಜಿಲ್ಲಾ ನಿವೃತ್ತ ನೌಕರರ ಸಂಘದ ಸಭಾಂಗಣದಲ್ಲಿ ದಿನಾಂಕ 25–4–2017ರಂದು ನಡೆಸಲಾಯಿತು. ಡೀಡ್ಸ್‌ನ ತುಕಾರಾಮ ಎಕ್ಕಾರುರವರು ಪೂರಕ ಕಾನೂನು ಯೋಜನೆಯ ಮೂರು ಹಂತದ ತರಬೇತಿಯ ಸಂಪೂರ್ಣ ಮಾಹಿತಿ ನೀಡಿ ಸಹಭಾಗಿ ಸಂಸ್ಥೆಗಳ ಪ್ರೋತ್ಸಾಹ, ಮಾರ್ಗದರ್ಶನ ಸಹಭಾಗಿತ್ವವನ್ನು ಕೇಳಿಕೊಂಡರು. ಸಭೆಯಲ್ಲಿ ಸೃಷ್ಟಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ವಿದ್ಯಾ ವಿವಿಧೋದ್ದೇಶಗಳ ಸಂಸ್ಥೆ, ಮಹೇಶ್ವರಿ ಮಹಿಳಾ ಮಂಡಳ, ಕರುಣಾ ಸಂಸ್ಥೆ ಹರ್ತಿ, ಸಂಕಲ್ಪ ಸಂಸ್ಥೆ, ಶ್ರೀರಾಮ್ ಟ್ರಸ್ಟ್, ಶ್ರೀ ಸಾಯಿ ಸಂಸ್ಥೆ ಹೊಸಳ್ಳಿ, ಸೇವ್ ಮದರ್ ಫೌಂಡೇಶನ್, ಮಹಿಳಾ ಸಮಖ್ಯ, ಇನ್ನೊವೇಟಿವ್ ಲಾ ಫೋರಮ್, ಚಂದನ ಸಂಸ್ಥೆ ಶಿರಹಟ್ಟಿ, ಗದಗ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನದ ಮುಖ್ಯಸ್ಥರು ಭಾಗವಹಿಸಿದ್ದರು. ಜಿಲ್ಲಾ ಸಂಚಲನದ ಮುಖ್ಯ ಸಂಚಾಲಕಿ ಮಂಜುಳಾ ಕಲಕೇರಿ ಎಲ್ಲರನ್ನೂ ಸ್ವಾಗತಿಸಿ, ಡೀಡ್ಸ್‌ನ ಫಕ್ಕೀರಮ್ಮ ಎಸ್ ಲಕ್ಕುಂಡಿ ಕಾರ್ಯಕ್ರಮ ನಿರ್ವಹಿಸಿದರು.



### ಪೂರಕ ಕಾನೂನು ಸುಗಮಗಾರರ ಮಾರ್ಗದರ್ಶನ ಕಾರ್ಯಕ್ರಮ



ಪೂರಕ ಕಾನೂನು ತರಬೇತಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪೂರಕ ಕಾನೂನು ಕೋರ್ಸ್ ಬಗೆಗಿನ ಮಾಹಿತಿ ಕಾರ್ಯಕ್ರಮವನ್ನು 25–4–2017ರಂದು ಗದಗದ ಕರ್ನಾಟಕ ಜಿಲ್ಲಾ ನಿವೃತ್ತ ನೌಕರರ ಸಂಘದ ಸಭಾಂಗಣದಲ್ಲಿ ನಡೆಸಲಾಯಿತು. ಡೀಡ್ಸ್‌ನ ತುಕಾರಾಮ ಎಕ್ಕಾರುರವರು ಪೂರಕ ಕಾನೂನು ತರಬೇತಿ ಯೋಜನೆಯ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸ್ವಯಂ ಸೇವಾ ಸಂಸ್ಥೆಗಳಿಂದ ಒಟ್ಟು 34 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಮಂಜುಳಾ ಕಲಕೇರಿ ಸ್ವಾಗತ, ಲಕ್ಷ್ಮೀ ಗ್ರಾಮಪುರೋಹಿತ ಪ್ರಾರ್ಥನೆ, ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಫಕ್ಕೀರಮ್ಮ ಲಕ್ಕುಂಡಿ ಅವರು ನಿರ್ವಹಿಸಿದರು.

### ಹಳೆಯ ಪೂರಕ ಕಾನೂನು ಸುಗಮಗಾರರ ತರಬೇತಿ

ಮೂರು ದಿನಗಳ ತರಬೇತಿಯು ಗದಗ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರದಲ್ಲಿ (26.5.2017 ರಿಂದ) ನಡೆಯಿತು. ಡೀಡ್ಸ್ ನ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಅವರು ತರಬೇತಿಯ ಉದ್ದೇಶ ಹಾಗೂ ಸುಗಮಗಾರರ ಮುಂದಿನ ಜವಾಬ್ದಾರಿಗಳ ಸಂಕ್ಷಿಪ್ತ ವಿವರಣೆ ನೀಡಿದರು. ಮೊದಲ ಹಂತದ ಲಿಂಗತ್ವ ವಿಷಯಗಳ ಮೇಲೆ ತರಬೇತಿ ನಡೆಯಿತು. ಬಳ್ಳಾರಿಯಿಂದ ರೇಣುಕಾ, ಪಂಕಜ ಗದಗದಿಂದ ಪ್ರಭಾವತಿ, ಮಂಜುಳ ಕಳಕೇರಿ, ಮಂಜುಳ ಇಟಗಿ, ಫರೀದಾ ಬೇಗಮ್ ಮತ್ತು ಯಶೋಧಾರವರು ಭಾಗವಹಿಸಿದ್ದರು. ಡಾ. ಎಂ ಜಿ ಶೋಭಾ ದೇವಿಯವರು ವೀಕ್ಷಕರಾಗಿ ಸಲಹೆ ಸೂಚನೆಗಳನ್ನು ನೀಡಿದರು. ತುಕಾರಾಮ ಎಕ್ಕಾರು, ದಿವ್ಯಾ ಜೋಗಿ, ಗುಲಾಬಿ ಬಿಳಿಮಲೆ ಉಪಸ್ಥಿತರಿದ್ದರು. ಫಕ್ಕೀರಮ್ಮ ಸ್ವಾಗತಿಸಿ ವಂದಿಸಿದರು.



**ವರದಿ:**
**ಫಕ್ಕೀರಮ್ಮ ಎಸ್ ಲಕ್ಕುಂಡಿ**

## ಕೊಪ್ಪಳ ಜಿಲ್ಲೆ

### ಲೀಡ್ ಸ್ವಯಂಸೇವಾ ಸಂಸ್ಥೆಯ ಆಯ್ಕೆ

ಕೊಪ್ಪಳ ಜಿಲ್ಲೆಯಲ್ಲಿ ಸರ್ವೋದಯ ಸಂಸ್ಥೆಯನ್ನು ಸಂಪರ್ಕಿಸಿ ಅದರ ಪದಾಧಿಕಾರಿಗಳೊಂದಿಗೆ 10–1–2017 ರಂದು ಸಭೆಯೊಂದನ್ನು ನಡೆಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ನಾಗರಾಜ್ ದೇಸಾಯಿಯವರು ಎಲ್ಲರನ್ನೂ ಸ್ವಾಗತಿಸಿದರು. ಡೀಡ್ಸ್‌ನ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಪೂರಕ ಕಾನೂನು ಯೋಜನೆಯ ಮಾಹಿತಿ ನೀಡಿದರು. ಯೋಜನೆಯ ಬಗ್ಗೆ ಸಂಸ್ಥೆಯೊಂದಿಗೆ



ವರದಿ:
ದಿವ್ಯಾ ಅದಿತಿ ಜೋಗಿ



ಒಡಂಬಡಿಕೆ ಮಾಡಿಕೊಳ್ಳಲಾಯಿತು. ಮೋಹನ್‌ಚಂದ್ರ ಸಭೆಯನ್ನು ನಿರ್ವಹಿಸಿದರು. ತುಕಾರಾಮ ಎಕ್ಕಾರು ಉಪಸ್ಥಿತರಿದ್ದರು.

### ಪೂರಕ ಕಾನೂನು ಮಾರ್ಗದರ್ಶನ ಕಾರ್ಯಕ್ರಮ

ಪೂರಕ ಕಾನೂನು ತರಬೇತಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪೂರಕ ಕಾನೂನು ಕೋರ್ಸ್ ಬಗೆಗಿನ ಮಾಹಿತಿ ಕಾರ್ಯಕ್ರಮವನ್ನು 24–4–2017 ರಂದು ಕೊಪ್ಪಳದ ಕೃಷಿ ಶಿಕ್ಷಣ ವಿಸ್ತರಣಾ ಕೇಂದ್ರದಲ್ಲಿ ನಡೆಸಲಾಯಿತು. ಸರ್ವೋದಯ ಸಂಸ್ಥೆಯ ಅಧ್ಯಕ್ಷರಾದ ನಾಗರಾಜ ದೇಸಾಯಿಯವರು ಎಲ್ಲರನ್ನೂ ಸ್ವಾಗತಿಸಿದರು. ಆನಂತರ ಪೂರಕ ಕಾನೂನು ತರಬೇತಿ ಯೋಜನೆಯ ಮಾಹಿತಿಯನ್ನು ಡೀಡ್ಸ್‌ನ ತುಕಾರಾಮ ಎಕ್ಕಾರುರವರು ನೀಡಿದರು. ಸಭೆಯಲ್ಲಿ ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆಯ ಜಿಲ್ಲಾ ಸಂಯೋಜಕರಾದ ಶ್ರೀ ಹರೀಶ್ ಜೋಗಿ, ಕೃಷಿ ಶಿಕ್ಷಣ ವಿಸ್ತರಣಾ ಘಟಕದ ಡಾ. ಎಂ. ಬಿ. ಪಾಟೀಲ್‌ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 12 ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು, 35 ಪೂರಕ ಕಾನೂನು ತರಬೇತಿಯ ಅಭ್ಯರ್ಥಿಗಳು ಭಾಗವಹಿಸಿದ್ದರು. ಡೀಡ್ಸ್‌ನ ದಿವ್ಯಾ ಜೋಗಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಇಫೆಕ್ಟ್ ಓರಿಯೆಂಟೇಶನ್ ಕಾರ್ಯಾಗಾರ

ಯೋಜನೆಯ ತಯಾರಿ ಹಂತಗಳು, ಯೋಜನೆಯ ನಿರ್ವಹಣೆಗೆ ಸಂಬಂಧಿಸಿ ಡೀಡ್ಸ್ ಸಿಬ್ಬಂದಿಗಳ ಸಾಮರ್ಥ್ಯ ಹೆಚ್ಚಿಸುವ ದೃಷ್ಟಿಯಿಂದ ಎರಡು ಹಂತಗಳ (ಒಟ್ಟು 7 ದಿನಗಳು) ಕಾರ್ಯಾಗಾರವು ನಡೆಯಿತು. ಮೊದಲ ಹಂತದ ಕಾರ್ಯಾಗಾರವು ಮಂಗಳೂರಿನಲ್ಲಿ ನಡೆದಿದ್ದು, ಎರಡನೇ ಹಂತದ ಕಾರ್ಯಾಗಾರವು ಕೊಪ್ಪಳದಲ್ಲಿ ನಡೆಯಿತು. ಕಾರ್ಯಾಗಾರವನ್ನು ದೆಹಲಿಯ ಆಸ್ಕ್ ಸಂಸ್ಥೆಯ ಪ್ರಕಾಶ್ ಕುಮಾರ್ ಲಾಯಕ್ ಮತ್ತು ಬರ್ನಾಲಿ ದಾಸ್ ನಡೆಸಿಕೊಟ್ಟರು. ಮಿಸೀರಿಯೋರ್‌ನ ಸಲಹೆಗಾರರಾದ ಮರಿಟಾ ಈಶ್ವರನ್ ಉಪಸ್ಥಿತರಿದ್ದರು.





ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಒಪ್ಪಿದ ಸಂಸ್ಥೆಗಳು – ಸೇವಾಸಂಸ್ಥೆ ಕೊಪ್ಪಳ, ಮಹಿಳಾ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ, ಶ್ರೀ ಅಭಿನವ ಸಿದ್ದೇಶ್ವರ ಕ್ಷೇಮಾಭಿವೃದ್ಧಿ ತರಬೇತಿ ಸಂಸ್ಥೆ, ಮಹಿಳಾ ವೃತ್ತಿ ಮತ್ತು ಶಿಕ್ಷಣ ಅಭಿವೃದ್ಧಿ ಸಂಘ, ಸಿಂಚನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಆರೋಗ್ಯ ಸಂವರ್ಧನಾ ಸಂಸ್ಥೆ, ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆ, ಶ್ರೀ ಕಾರ್ಗಿಲ್ ಮಲ್ಲಯ್ಯ ವಿಕಲಚೇತನ ಸಂಸ್ಥೆ, ವಂದೇ ಮಾತರಂ ಸೇವಾ ಸಂಘ, ಸರ್ಡ್ಸ್ ಸಂಸ್ಥೆ, ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆ.

### ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ



ಕೊಪ್ಪಳ ಜಿಲ್ಲೆಯಲ್ಲಿ 1994ರಲ್ಲಿ ಪ್ರಾರಂಭವಾದ ಸರ್ವೋದಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ತನ್ನ ಪರಿಸರ ಹಾಗೂ ಸಮಗ್ರ ಸಮುದಾಯ ಅಭಿವೃದ್ಧಿ ಚಟುವಟಿಕೆಗಳ ಮೂಲಕ ಬಡ ಸಮುದಾಯಗಳ ಏಳಿಗೆಗೆ ದುಡಿಯುತ್ತಿದೆ. ಸಂಸ್ಥೆಯು ಶ್ರೀ ನಾಗರಾಜ ದೇಸಾಯಿಯವರ ನೇತೃತ್ವದಲ್ಲಿ ಮಹಿಳೆ ಮತ್ತು ಮಕ್ಕಳ ಪರವಾಗಿ ಕೆಲಸ ಮಾಡುತ್ತಿದ್ದು, ಮಕ್ಕಳ ಸಹಾಯವಾಣಿಯ ಜಿಲ್ಲಾ ಕೇಂದ್ರವನ್ನು ನಡೆಸುತ್ತಿದೆ. ಯುವಕ ಯುವತಿಯರಿಗೆ ವೃತ್ತಿ ತರಬೇತಿ, ಶೌಚಾಲಯ ನಿರ್ಮಾಣ ಜಾಗೃತಿ, ಪರಿಸರ ಸಂರಕ್ಷಣೆ ಮೊದಲಾದ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಕೆರೆ ಅಭಿವೃದ್ಧಿ, ಮಹಿಳೆಯರ ಅಭಿವೃದ್ಧಿಗಾಗಿ ಸ್ವಸಹಾಯ ಸಂಘಗಳು ಮತ್ತು ಅವುಗಳಿಗೆ ಮಾರುಕಟ್ಟೆ ಸಂಪರ್ಕವನ್ನು ಕಲ್ಪಿಸಿದೆ. ಡೀಡ್ಸ್ ಸಂಸ್ಥೆಯ ಪೂರಕ ಕಾನೂನು ತರಬೇತಿ ಯೋಜನೆಗೆ ಸದರಿ ಸಂಸ್ಥೆಯು ಸಹಭಾಗಿತ್ವ ನೀಡುತ್ತಿದೆ.

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ          ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು



ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037
E-mail : deeds82@rediffmail.com